ಬಂದುಬಿಡುತ್ತಾರೆ ಬಿಡಿ. I think they may be here by afternoon, ಲಂಚ್ ಆದಮೇಲೆ ಬಹುಶಃ ಬಂದುಬಿಡುತ್ತಾರೆ. ಈಗ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಕೃಷಿ ಮಂತ್ರಿಗಳು ತಯಾರಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯನ್ನು ಲಂಚ್ ಆದಮೇಲೆ ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್ ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಈಗ ಉತ್ತರ ಕೊಡುವುದಕ್ಕೆ ಮಂತ್ರಿಗಳು ತಯಾರಿದ್ದಾರಲ್ಲ. Please excuse me. When the Minister is ready to reply, ಪ್ರಶ್ನೋತ್ತರವನ್ನು ಈಗಲೇ ತೆಗೆದುಕೊಳ್ಳೋಣ.

ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳು

232 (2573) : ಶ್ರೀ ಅಪ್ಪಚ್ಚುರಂಜನ್.ಎಂ.ಪಿ. (ಸೋಮವಾರ ಪೇಟೆ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ತೆರೆಯಲು ಉದ್ದೇಶಿಸಿದೆ;

(ಆ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಅಲೂರು ಸಿದ್ದಾಪುರದಲ್ಲಿ ನೂತನ ಪೊಲೀಸ್ ಠಾಣೆ ತೆರೆಯುವುದಾಗಿ ಹಿಂದಿನ ಗೃಹ ಸಚಿವರು ಸದನದಲ್ಲಿ ಭರವಸೆ ನೀಡಿದ್ದು ನಿಜವೇ; ಹಾಗಿದ್ದಲ್ಲಿ, ಇನ್ನೂ ಏಕೆ ಈ ಬಗ್ಗೆ ಕ್ರಮ ಕೈಗೊಂಡಿಲ್ಲ;

(ಇ) ಹಾಗಿದ್ದರೆ, ಈ ಠಾಣೆಯನ್ನು ಯಾವಾಗ ತೆರೆಯಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಅ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹತ್ತು ಪೊಲೀಸ್ ಠಾಣೆಗಳನ್ನು ತೆರೆಯಲುದ್ದೇಶಿಸಿದ್ದು, ಪೊಲೀಸು ಠಾಣೆಗಳು ಅತ್ಯಗತ್ಯವಿರುವಂತಹ ಸ್ಥಳಗಳನ್ನು ಠಾಣೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

(ಆ) ಇಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ದಿ: 23-7-1996ರಲ್ಲಿ ಇದೇ ಪ್ರಶ್ನೆಯನ್ನು ನಾನು ಕೇಳಿದ್ದೆ. ಆ ಸಂದರ್ಭದಲ್ಲಿ ಇದು 1, 212ನೇ ಪ್ರಶ್ನೆ ಬಂದಿತ್ತು. ನಾನು ಮಾದಾಪುರ ಮತ್ತು ಅಲೂರು ಸಿದ್ದಾಪುರದಲ್ಲಿ ಪೊಲೀಸ್ ಠಾಣೆ ತೆಗೆಯುವ ಉದ್ದೇಶವಿದೆಯೇ

ಎಂದು ಕೇಳಿದಾಗ ಪರಿಶೀಲನೆ ಮಾಡಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಆ ಉತ್ತರದ ಕಾಪಿ ಕೂಡ ನನ್ನ ಹತ್ತಿರ ಇದೆ. ಆದರೆ ಈಗ ನನಗೆ ಕೊಟ್ಟಂತಹ ಉತ್ತರದಲ್ಲೆ 10 ಸ್ಥಳಗಳ ಮಾತ್ರ ಈ ಸಾರಿ ನಾವು ಠಾಣೆಗಳನ್ನು ತೆರೆಯುವುದಕ್ಕೆ ಮಾನದಂಡ ಏನು? ಇದನ್ನು ತಿಳಿಸಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ವಿಚಾರವಾಗಿ ಭರವಸೆಗಳ ಸಮಿತಿಯ ಪಟ್ಟಿಯನ್ನು ಕೂಡ ನಾನು ತರಿಸಿ ನೋಡಿದೆ. ಅದರಲ್ಲೆ ತಮ್ಮ ಭಾಗದಲ್ಲೆ ಎಲ್ಲೂ ಕೂಡ ಸ್ಪಷ್ಟವಾಗಿ ಪೊಲೀಸ್ ಠಾಣೆ ತೆರೆಯುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸದನದಲ್ಲೆ ಸಚಿವರು ಯಾರೂ ಕೂಡ ಕೊಟ್ಟಿಲ್ಲ. ಆದರೆ ತಾವು ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಹೇಳಿದ್ದರು ಎಂದು ಹೇಳುತ್ತಿದ್ದೀರಿ. ಪರಿಶೀಲನೆ ಎಂದು ಹೇಳಿದಾಗ ಅದು ಸ್ಪಷ್ಟವಾದಂತಹ ಆಶ್ವಾಸನೆಯಾಗುವುದಿಲ್ಲ. ಅದಾದಮೇಲೆ ದಿ:29-6-99ರಂದು ತಾವು ಕೇಳಿದಂತಹ ಪ್ರಶ್ನೆಗೆ ಉತ್ತರವಾಗಿ ಸೋಮವಾರ ಪೇಟೆ ತಾಲ್ಲೂಕಿನ ಆಲೂರೂ ಸಿದ್ದಾಪುರದಲ್ಲೆ ಪೊಲೀಸ್ ಹೊರ ಠಾಣೆ ತೆರೆಯುವ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ ಎಂದು ಕೊಟ್ಟಿದ್ದಾರೆ. ತಾವು ಇದಕ್ಕಿಂತಲೂ ಹಿಂದೆ ಏನಾದರೂ ಪ್ರಶ್ನೆ ಕೇಳಿದ್ದರೆ, ಅದನ್ನು ಕಳುಹಿಸಿಕೊಡಿ, ಅದನ್ನು ನಾನು ನೋಡುತ್ತೇನೆ. ಅಲ್ಲದೆ ತಾವು ಪೊಲೀಸ್ ಠಾಣೆ ತೆರೆಯುವುದಕ್ಕೆ ಯಾವ ಮಾನದಂಡ ಇರಬೇಕು ಎಂದು ಕೇಳಿದ್ದೀರಿ. ಅದಕ್ಕೆ ನ್ಯಾಷನಲ್ ಪೊಲೀಸ್ ಕಮೀಷನ್ನಿನ ರೆಕಮೆಂಡೇಷನ್ ಪ್ರಕಾರ ಸುಮಾರು 150 ಕಿಲೋಮೀಟರ್ ವ್ಯಾಪ್ತಿಯಲ್ಲಿ, 60 ಸಾವಿರ ಜನಸಂಖ್ಯೆ ಅಥವಾ 750 ಕ್ರಿಮಿನಲ್ ಕೇಸಸ್ ಅಂಡರ್ ಐಪಿಸಿಯಲ್ಲಿ ರಿಜಿಸ್ಟರ್ ಆಗಿದ್ದರೆ, ಇದನ್ನು ಇಟ್ಟುಕೊಂಡು ಒಂದು ಸ್ಟೇಷನ್ ಮಾಡತಕ್ಕಂಥ ವಿಚಾರ ಇರುತ್ತದೆ. ಈಗಾಗಲೇ ತಾವು ಕೇಳತಕ್ಕಂಥ ಭಾಗದಲ್ಲಿ ಒಂದು ಸ್ಟೇಷನ್‌ನ ಅಗತ್ಯ ಇದೆಯೆಂದು ಸರ್ಕಾರಕ್ಕೆ ಮನದಟ್ಟಾಗಿದೆ. ಆದರೆ ಈಗ ಪೊಲೀಸ್ ಸ್ಟೇಷನ್ ತೆರೆಯಬೇಕು. ಈ ವರ್ಷದ ಅನುದಾನದಲ್ಲೆ ಸುಮಾರು 10 ಪೊಲೀಸ್ ಸ್ಟೇಷನ್ ತೆರೆಯಬೇಕು ಎಂದು ಸರ್ಕಾರದ ಗುರಿಯಾಗಿದೆ. ಆ 10 ಸ್ಟೇಷನ್‌ನಲ್ಲೆ ಒಂದು ಸ್ಟೇಷನ್ ಕಂಬಾರಪಲ್ಲಿಯಲ್ಲಿ ತೆರೆಯಬೇಕೆಂದು ತೀರ್ಮಾನ ಮಾಡಿದೆ. ಇನ್ನು ಉಳಿದ ಒಂಭತ್ತು ಸ್ಟೇಷನ್‌ಗಳನ್ನು ಆದ್ಯತೆ ಮೇಲೆ ಎಲ್ಲಿ ತೆರೆಯಬೇಕು ಎಂದು ಸರ್ಕಾರದ ಯೋಚನೆಯಲ್ಲಿದೆ ಇದೆ. ಒಂದು ವಿಚಾರವನ್ನು ಇಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ರಾಜ್ಯದಲ್ಲಿ 781 ಪೊಲೀಸ್ ಸ್ಟೇಷನ್‌ಗಳು ಇವೆ. 781ರ ಜೊತೆಗೆ ಇನ್ನು ಸರಿಸುಮಾರು 200ಕ್ಕೂ ಹೆಚ್ಚು ಪೊಲೀಸ್ ಸ್ಟೇಷನ್ ತೆರೆಯಬೇಕಾಗುತ್ತದೆ. ಜನಸಂಖ್ಯೆ ವ್ಯಾಪ್ತಿಯನ್ನು ಆಧರಿಸಿದಂತಹ ಸಂದರ್ಭದಲ್ಲಿ ನಮ್ಮ ಕ್ರೈಮ್ ರೇಟ್ಸ್ ನೋಡಿದಾಗಲೂ ಕೂಡ ಇನ್ನು 200 ಪೊಲೀಸ್ ಸ್ಟೇಷನ್ ತೆರೆಯಬೇಕಾಗುತ್ತದೆ. ಅವುಗಳಲ್ಲಿ ಈಗ ಸಧ್ಯದ ಪರಿಸ್ಥಿತಿಯಲ್ಲಿ 10 ಪೊಲೀಸ್ ಸ್ಟೇಷನ್ ತೆರೆಯಬೇಕೆಂದಿದೆ. ಅದರಲ್ಲಿ ಮುಖ್ಯವಾಗಿ ಕೊಡಗಿನಲ್ಲಿ ಜನಸಂಖ್ಯೆ ಆಧಾರವನ್ನು ನೋಡಿಕೊಂಡು ಅಥವಾ ಆ ಪ್ರದೇಶದ ವ್ಯಾಪ್ತಿಯನ್ನು ನೋಡಿದಾಗ ನಮ್ಮ ರೆಕಮೆಂಡೇಷನ್ ಪ್ರಕಾರ ಸ್ಟೇಷನ್ ಬೇಕಾಗಬಹುದು. ಆದರೆ ಕೊಡಗಿನಲ್ಲಿ ವಿಶೇಷವಾಗಿ ಅಂತಹ ಸಂದರ್ಭ ಇಲ್ಲ. ಕಾರಣ ಅಲ್ಲಿ ಈಗಾಗಲೇ ಮೂಲಭೂತವಾಗಿ 16 ಪೊಲೀಸ್ ಸ್ಟೇಷನ್ ಇದೆ. 20 ಜನ ಸಬ್‌ಇನ್ಸ್‌ಪೆಕ್ಟರ್‌ಗಳು ಇದ್ದಾರೆ. 33 ಜನ ಅಸಿಸ್ಟೆಂಟ್

ಸಬ್‌ಇನ್ಸ್‌ಪೆಕ್ಟರ್, 140 ಹೆಡ್ ಕಾನ್ಸ್‌ಟೇಬಲ್‌ಗಳು ಹಾಗೂ 435 ಪೊಲೀಸ್ ಕಾನ್ಸ್‌ಟೇಬಲ್‌ಗಳು ಇದ್ದಾರೆ. ಈ ರೀತಿಯಾಗಿ ಕೊಡಗಿನಲ್ಲಿ ಲಾ ಅಂಡ್ ಆರ್ಡರ್ ಮೇಸ್‌ಟೈನ್ ಮಾಡುವುದಕ್ಕೆ ಎಲ್ಲಾ ರೀತಿಯಾದಂತಹ ವ್ಯವಸ್ಥೆ ಕೂಡ ಇದೆಯೆನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಗೈಡ್‌ಲೈನ್ಸ್ ಅನ್ನು 150 ಕಿಲೋಮೀಟ್ರ ವ್ಯಾಪ್ತಿಯೊಳಗೆ ತೆರೆಯುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಕೊಡಗಿನಲ್ಲಿ 16 ಸಬ್‌ಇನ್ಸ್‌ಪೆಕ್ಟರ್‌ಗಳು ಇದ್ದಾರೆ ಎಂದು ಕೂಡ ಹೇಳಿದ್ದೀರಿ. ನಮ್ಮ ಕೊಡಗಿನಲ್ಲಿ 60, ಹಾಗೂ 80 ಕಿಲೋಮೀಟರ್ ವ್ಯಾಪ್ತಿಯಲ್ಲೇ ಅಷ್ಟು ಪೊಲೀಸ್ ಸ್ಟೇಷನ್ ಇವೆ. ಆದರೆ ನಮಗೆ ಐ.ಪಿ.ಎಸ್ ಆಫೀಸರ್ಸ್ ಬೇಕಾಗಿರಲಿಲ್ಲ. ಆದರೆ ತಾವು ಅಲ್ಲಿ ಮೂರು ಜನ ಐ.ಪಿ.ಎಸ್ ಆಫೀಸರ್‌ಗಳನ್ನು ಮಾಡಿದ್ದೀರಿ. ನಮಗೆ ಬೇಕಾಗಿರುವುದು ಪೊಲೀಸ್ ಸ್ಟೇಷನ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಒಬ್ಬ ಐ.ಪಿ.ಎಸ್ ಆಫೀಸರ್‌ಗೆ ಖರ್ಚು ಮಾಡುವ ಬದಲು ಮೂರು ಜನ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಹಾಕಬಹುದು. ನಮ್ಮ ಕೊಡಗಿನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಅಡಾಪ್ಟ್ ಮಾಡಿಕೊಂಡಿದ್ದಾರೆ. ಜನಸಂಖ್ಯೆ ಕೂಡ ನಿಯಂತ್ರಣದಲ್ಲಿದೆ. ಹಾಗಿದ್ದಾಗ ನಮಗೆ ಅನ್ಯಾಯವಾಗುತ್ತದೆ.

10-50 ಎ.ಎಂ.

ಯಾವುದೇ ಸಂದರ್ಭದಲ್ಲೂ ಜನಸಂಖ್ಯೆಯ ಆಧಾರದ ಮೇಲೆ ನೀವು ನಿಗದಿ ಮಾಡದಿದ್ದರೆ ಕೊಡಗಿನ ಜನರಿಗೆ ಅನ್ಯಾಯವಾಗುತ್ತದೆ. ಅದುದರಿಂದ ದಯಮಾಡಿ ಕೊಡಗಿನಲ್ಲಿ ಎಲ್ಲಿ ಕ್ರಿಮಿನಲ್ ಕೇಸ್ ಹೆಚ್ಚಾಗಿದೆ, ಅದು ಆಲೂರು ಸಿದ್ದಾಪುರವಿರಬಹುದು, ಮಾದಪುರವಿರಬಹುದು, ಅಲ್ಲಿ ತಾವು ಠಾಣೆಗಳನ್ನು ಈ ಸಾರಿಯಾದರೂ ಓಪನ್ ಮಾಡಬೇಕೆಂದು ಅಧ್ಯಕ್ಷರ ಮೂಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ(ಮಾನ್ಯ ಸಚಿವರು, ಮಾನ್ಯ ಗೃಹ ಸಚಿವರ ಪರವಾಗಿ): ತಾವು ಜನಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಹೇಳಿದ್ದೀರಿ, ಬಹಳ ಸಂತೋಷ, ಮತ್ತೆ ಕ್ರಿಮಿನಲ್ಕೇಸ್ ಸಹ ಪ್ರತಿ ವರ್ಷ ಕಡಿಮೆಯಾಗುತ್ತಿದೆ ಹಾಗಾಗಿ ಪೊಲೀಸ್ ಠಾಣೆಯ ಅವಶ್ಯಕತೆ ಅಷ್ಟು ಇಲ್ಲವೆಂದು ಈಗಾಗಲೇ ನಾನು ವಿವರಗಳನ್ನು ಕೊಟ್ಟಿದ್ದೇನೆ. ಕೊಡಗು ಜಿಲ್ಲೆಯಲ್ಲಿ ಯಾವ ರೀತಿಯಾಗಿ ಪೊಲೀಸ್ ಠಾಣೆಯನ್ನು ಸೆಟ್ ಅಪ್ ಮಾಡಿದೆ ಎನ್ನುವಂಥಾದ್ದನ್ನು ಹೇಳಿದ್ದೇನೆ. ತಾವು ಹಿಂದೆ ಆ ಭಾಗದಲ್ಲಿ ನಮ್ಮ ಜೊತೆಯಲ್ಲಿ ಕುಳಿತು ವಾದ ಮಾಡಿರುವಂಥಾದ್ದು ನಮ್ಮ ಗಮನದಲ್ಲಿ ಇದೆ. ನಮ್ಮ ಕಮೀಷನರ್ ರೆಕಮೆಂಡೇಷನ್ ಪ್ರಕಾರ ಅವಶ್ಯಕತೆ ಇದೆ ಎನ್ನುವಂಥಾದ್ದು ಸರ್ಕಾರ ಮನಗಂಡಿದೆ, ಮತ್ತೆ ಪೊಲೀಸ್ ಮಹಾ ನಿರ್ದೇಶಕರು ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ಪೊಲೀಸ್ ಠಾಣೆ ಬೇಕೆನ್ನುವಂಥಾದ್ದು ಕೂಡ ಇದೆ. ಇದನ್ನು ಯಾವ ಸಂದರ್ಭದಲ್ಲಿ ಮಂಜೂರು ಮಾಡುತ್ತೇವೆಂಬುದು ಸರ್ಕಾರದ ಮುಂದಿರುವಂತಹ ಪ್ರಶ್ನೆಯಾಗಿದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಕ್ರೈಮ್‌ರೇಟ್ ಕಡಿಮೆಯಾಗುತ್ತಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನು ಕೇಳುವುದೇನೆಂದರೆ ವಾಸ್ತವವಾಗಿ ಇದು ಕಡಿಮೆಯಾಗಿದೆಯೋ ಅಥವಾ ಅಲ್ಲಿ ಕೇಸ್‌ಗಳು ದಾಖಲು ಆಗುತ್ತಿಲ್ಲವೊ? ಕಾರಣ ಯಾವುದು ಎಂದು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಪೂರಕವಾಗಿ ಈಗಾಗಲೇ ಸ್ಟೇಟಸ್ ಕೂಡ 1996-97, 1997-98, 1998-99ರವರೆಗೂ ಮೈನ್‌ಟೈನ್ ಆಗುತ್ತಿದೆ.

ಶ್ರೀ ಎಂ.ಎಂ. ನಾಣಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಬೈರೇಗೌಡರು ಕೊಡಗಿನಲ್ಲಿ ಕ್ರೈಮ್‌ರೇಟ್ ಕಡಿಮೆಯಾಗುತ್ತಿರುವುದರ ಬಗ್ಗೆ ಹೇಳಿದರು. ಈ ವಿಚಾರವಾಗಿ ಹೇಳುವುದಾದರೆ ಅಲ್ಲಿ ಜನರು ಬಹಳ ನಾಗರಿಕರಾಗಿದ್ದಾರೆ, ಒಳ್ಳೆಯ ಪ್ರಜ್ಞಾವಂತವಾಗಿದ್ದಾರೆ. ನಾವು ಶಿಸ್ತು ಪಾಲನೆ ಮಾಡುವುದರಲ್ಲಿ ಅಗ್ರಗಣ್ಯರಾಗಿದ್ದೇವೆ, ಹಾಗಾಗಿ ಇದು ಕಡಿಮೆಯಾಗುತ್ತಿದೆ ಮತ್ತೆ ಬೇರೆ ಏನು ಕಾರಣವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ನಾಣಯ್ಯನವರು ಹೇಳಿರುವ ಹಾಗೆ ನನಗನಿಸುತ್ತಿರುವುದೇನೆಂದರೆ ಈಗ ಕೊಡಗಿನ ಮೇಲೆ ಹೆಚ್ಚಿನ ಲಕ್ಷ್ಯವನ್ನು ಇಡಬೇಕಾಗುತ್ತದೆ, ಏಕೆಂದರೆ ಲಾ ಅಂಡ್ ಆರ್ಡರ್ ಪ್ರಾಬ್ಲಂ ಏನಾಗುತ್ತಿದೆ ಎಂದರೆ ಅವರು ಪ್ರತ್ಯೇಕವಾಗಿ ರಾಜ್ಯಬೇಕೆಂದು ಕೇಳುತ್ತಿದ್ದಾರೆ, ಇದರ ಬಗ್ಗೆ ಕೂಡ ಹೋರಾಟ ಪ್ರಾರಂಭವಾಗಿದೆ.

ಅಧ್ಯಕ್ಷರು: ಮಾನ್ಯ ಎಸ್.ಎಸ್. ಪಾಟೀಲ್‌ರವರೆ, ಆ ವಿಷಯ ಬೇಡ, ಈಗ ಪ್ರಶ್ನೋತ್ತರ ವೇಳೆ.

ಶ್ರೀ ಎಂ.ಎಂ. ನಾಣಯ್ಯ: ಮಾನ್ಯ ಅಧ್ಯಕ್ಷರೆ, ಕೊಡಗಿನ ಬಗ್ಗೆ ಪ್ರತ್ಯೇಕವಾದ ರಾಜ್ಯವಾಗಬೇಕೆಂಬ ಬೇಡಿಕೆ ಬರಬೇಕೆಂದು ಇದ್ದದ್ದು ಅಲ್ಲಿ ರಸ್ತೆಗಳು, ಕಾಲುವೆಗಳು, ಸೇತುವೆಗಳು, ಕೆರೆಗಳು, ಶಾಲೆಗಳು ಇದರ ಬಗ್ಗೆ ಅಭಿವೃದ್ಧಿ ಕುಂಠಿತಗೊಂಡಿತ್ತು. ಅದುದರಿಂದ ಅದರ ಬಗ್ಗೆ ಬೇಡಿಕೆ ಬಂತು, ಈಗ ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಕೊಡುತ್ತಿದೆ, ಈಗ ಈ ಬೇಡಿಕೆ ಕೂಡ ಕಡಿಮೆಯಾಗಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗ ಕ್ರೈಮ್ ರಿಪೋರ್ಟ್ 1996ರಲ್ಲಿ 1,14,475 1997ರಲ್ಲಿ 1,14,863 1998ರಲ್ಲಿ 1,10533 ಇದೆ. ಈ ರೀತಿಯಾಗಿ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಇದೇ ರೀತಿಯಾಗಿ ಬೇರೆ ಬೇರೆ ಡೀಟೈಲ್‌ಗಳನ್ನು ಕೊಡುವಂಥಾದ್ದಕ್ಕೆ ನಮಗೆ ಏನು ತೊಂದರೆ ಇಲ್ಲ. ಆದರೆ ಕ್ರೈಮ್‌ರೇಟ್ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವುದರಲ್ಲಿ ಅಂತ ವಾತಾವರಣ ರಾಜ್ಯದಲ್ಲಿ ಸೃಷ್ಟಿಯಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಕೊಡಗಿನಲ್ಲಿ ಐಎಸ್‌ಐ ಚಟುವಟಿಕೆಗಳು ನಡೆಯುತ್ತಿವೆ ಎಂದು ಪತ್ರಿಕೆಗಳಲ್ಲಿ ಬಂದಿವೆ. ಇದರ ಜೊತೆಗೆ ಪಾಕಿಸ್ತಾನದ ಪ್ರಜೆಯೊಬ್ಬರನ್ನು ಬಂಧಿಸಿ ಕರೆದುಕೊಂಡು ಹೋಗಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಈ ರೀತಿ ಪರಿಸ್ಥಿತಿ ಇರುವಾಗ ತಾವು ಕೊಡಗಿನಲ್ಲಿ ಠಾಣೆಯನ್ನು ತೆರೆಯಬೇಕು. ನಮಗೆ ಐ.ಪಿ.ಎಸ್ ಅಧಿಕಾರಿ ಒಬ್ಬರು ಸಾಕು, ಇದು ಚಿಕ್ಕಜಿಲ್ಲೆಯಾಗಿದೆ. ಆದುದರಿಂದ, ಇದನ್ನು ಕಡಿಮೆ ಮಾಡಿ ಅಲ್ಲಿಗೆ ಪೊಲೀಸ್ ಠಾಣೆಯನ್ನು ಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಈಗ ತಾವು 10 ಠಾಣೆಗಳ ಬಗ್ಗೆ ಹೇಳಿದ್ದೀರಿ, ಅದರಲ್ಲಿ ಒಂದು ಪೊಲೀಸ್ ಠಾಣೆಯನ್ನು ಇಲ್ಲಿಯದು ಸೇರಿಸಬೇಕೆಂದು ನಾನು ಬೇಡಿಕೆಯನ್ನು ಇಡುತ್ತೇನೆ.

ಅಧ್ಯಕ್ಷರು: ತಾವು ಪರಿಶೀಲಿಸುತ್ತೇವೆಂದು ಹೇಳಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಆವರು ಪರಿಶೀಲಿಸುತ್ತೇವೆಂದು ಹೇಳಿದರೆ ಈಗ ಇದನ್ನು ಹೇಳಿ ನಾಲ್ಕು ವರ್ಷವಾದರೂ ಪರಿಶೀಲನೆಯಾಗಲಿಲ್ಲ. ಆದುದರಿಂದ ದಯಮಾಡಿ ಮಾಡುತ್ತೇವೆನ್ನುವಂತಹ ಆಶ್ವಾಸನೆಯನ್ನು ಕೊಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಐ.ಎಸ್.ಐ. ಚಟುವಟಿಕೆ ಇದೆ, ಪ್ರವಾಸಿಗರು ಕೂಡ ಹೆಚ್ಚು ಸಂಖ್ಯೆಯಲ್ಲಿ ಕೊಡಗು ಜಿಲ್ಲೆಗೆ ಹೋಗುತ್ತಿದ್ದಾರೆನ್ನುವಂಥಾದ್ದು ಹೇಳುತ್ತಿದ್ದೀರಿ. ತಾವು ಅಂಥಾದ್ದು ಏನಾದರೂ ಇದ್ದರೆ ದಯಮಾಡಿ ತಿಳಿಸಿ, ತಾವು ಈಗಾಗಲೇ ಸದನಕ್ಕೆ ತಿಳಿಸಿದ್ದೀರಿ. ಇದರ ಬಗ್ಗೆ ಸರ್ಕಾರ ಗಮನಿಸುತ್ತದೆ ಎನ್ನುವಂತಾದ್ದು ತಮಗೂ ಗೊತ್ತಿದೆ. ಇನ್ನು ಹತ್ತು ಪೊಲೀಸ್ ಠಾಣೆಯ ಬಗ್ಗೆ ಹೇಳುವುದಾದರೆ ಕಂಬಾಲಪಲ್ಲಿಗೆ ಅವಶ್ಯಕತೆ ಇತ್ತು, ಇದನ್ನು ಮಾಡಲು ಬೇಡಿಕೆ ಬಂತು. ಅದೇ ರೀತಿ ಕೊಡಗಿನಲ್ಲಿ ಅನಿವಾರ್ಯವಾಗಿ ಮಾಡಲೇ ಬೇಕೆನ್ನುವಂತಹ ಪ್ರಶ್ನೆ ಬಂದಾಗ ಪರಿಶೀಲನೆ ಮಾಡುತ್ತೇವೆ. ನಾವು ಆದ್ಯತೆಯ ಮೇಲೆ ಪೊಲೀಸ್ ಠಾಣೆಯನ್ನು ಕೊಡಬೇಕಾಗುತ್ತದೆ. ನಾವು ಲಾ ಅಂಡ್ ಆರ್ಡರ್ ದೃಷ್ಟಿಯಿಂದ ಇದನ್ನು ಕೊಡಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ನಾವು ಕೊಟ್ಟಿದ್ದೇವೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಇವರು ಪೊಲೀಸ್ ಠಾಣೆಯನ್ನು ಕೊಡಬೇಕೆಂದರೆ ಕಂಬಾಲಪಲ್ಲಿಯ ರೀತಿಯಲ್ಲಿ ನಾವು ಮಾಡಿಸಬೇಕೆಂದು ನಿಮ್ಮ ಸೂಚನೆಯಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕ್ರೈಮ್‌ರೇಟ್ ಕಡಿಮೆಯಾಗುತ್ತಿದೆ ಎಂದು ಹೇಳಿದ್ದೇನೆ. ಇಡೀ ರಾಜ್ಯದಲ್ಲೇ, ಅಲ್ಲ, ಕೋಲಾರ ಜಿಲ್ಲೆಯಲ್ಲೂ ಕೂಡ ಕಡಿಮೆಯಾಗುವ ವಾತಾವರಣ ಇರಬೇಕಾದರೆ ನಾವು ಅದನ್ನು ಸೃಷ್ಟಿ ಮಾಡುವಂಥಾದ್ದು ಬೇಡ.

ಶ್ರೀ ಸಿ. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ಚಾಮರಾಜನಗರ ಸಹ ಹೊಸ ಜಿಲ್ಲೆಯಾಗಿದೆ, ಇದು ಬಹಳ ಹಿಂದುಳಿದಂತಹ ಜಿಲ್ಲೆಯಾಗಿದೆ. ಇಲ್ಲಿಗೆ ಒಂದು ಮಹಿಳಾ

ಪೊಲೀಸ್ ಠಾಣೆ ಅತ್ಯಾವಶ್ಯಕವಾಗಿ ಬೇಕಾಗಿದೆ ಎಂದು ಹೇಳಿದ್ದೇನೆ. ನಾನು ಕೇಳುವಂಥಾದ್ದು ಈಗ ತಾವು ಠಾಣೆಗಳನ್ನು ಕೊಡುತ್ತಿದ್ದೀರಿ ಅದರಲ್ಲಿ ನಮ್ಮ ಚಾಮರಾಜನಗರಕ್ಕೂ ಒಂದನ್ನು ಕೊಡುವಂಥ ಭರವಸೆಯನ್ನು ಮಾನ್ಯ ಮಂತ್ರಿಯವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಈ ವಿಷಯವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗೆ ಹೋಗಿದೆ. ಆದರೂ ನಮ್ಮ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ರಸ್ತೆಯ ಹೆದ್ದಾರಿಯಲ್ಲಿ ಬರುವಂತಹ ಒಂದು ಹೋಬಳಿ ಕೇಂದ್ರವಾಗಿದೆ. ಅಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇದೆ ಎನ್ನುವಂಥಾದ್ದು ಇಲಾಖೆಯ ಮುಖಾಂತರ ಶಿಫಾರಸ್ಸು ಆಗಿ ಬಂದಿದೆ. ಆದುದರಿಂದ, ನನ್ನ ಲಿಖಿತ ಮೂಲಕ ಉತ್ತರದಲ್ಲೂ ಕೂಡ ಅಲ್ಲಿ ಠಾಣೆಯನ್ನು ಮಾಡಬೇಕೆನ್ನುವ ಉದ್ದೇಶವನ್ನು ತಿಳಿಸಿದ್ದಾರೆ. ಆದುದರಿಂದ, ಈ ಹತ್ತು ಠಾಣೆಗಳ ಪೈಕಿ ಬೇಗೂರಿನದು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಧರ್ಮಸ್ಥಳ ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಅಲ್ಲಿ ಒಂದು ದಿವಸಕ್ಕೆ ಹದಿನೈದು ಸಾವಿರದಿಂದ ಇಪ್ಪತ್ತು ಸಾವಿರ ಯಾತ್ರಾರ್ಥಿಗಳು ಬರುತ್ತಾರೆ. ನಾನೂ ಕೂಡ ಇಲ್ಲಿಗೆ ಪೊಲೀಸ್ ಠಾಣೆಯ ಅವಶ್ಯಕತೆ ಇದೆ ಎಂದು ಬೇಡಿಕೆಯನ್ನು ಸಲ್ಲಿಸಿದ್ದೇನೆ. ಆದುದರಿಂದ ತಾವು ಈಗ ಹತ್ತು ಠಾಣೆಗಳನ್ನು ಮಾಡಬೇಕೆಂದು ಇದ್ದೀರಿ ಅದರಲ್ಲಿ ಈ ಒಂದನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಸಾರ್ವಜನಿಕ ಸೌಲಭ್ಯಕ್ಕಾಗಿ ನಿವೇಶನಗಳ ಕಾದಿರಿಸುವಿಕೆ

233 (2277) ಶ್ರೀ ಡಿ.ಆರ್. ಪಾಟೀಲ್ (ಗದಗ):

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರವಶದಲ್ಲಿರುವ ಸಾರ್ವಜನಿಕ ಸೌಲಭ್ಯ (ಸಿವಿಕ್ ಅಮೆನಿಟೀಸ್)ಗಳಿಗಾಗಿ ಮೀಸಲಿಟ್ಟ ನಿವೇಶನಗಳ ಸಂಖ್ಯೆ ಎಷ್ಟು;

(ಆ) ನಿವೇಶನಗಳನ್ನು ಬಹಿರಂಗ ಹರಾಜು ಮುಖಾಂತರ ವಿತರಿಸಲಾಗುತ್ತದೆಯೆ;

(ಇ) ಹಾಗಿದ್ದರೆ ಇಲ್ಲಿಯವರೆಗೆ ಯಾವ ಸ್ಥಳದಲ್ಲಿ ಎಷ್ಟು ನಿವೇಶನಗಳು ಹರಾಜು ಮುಖಾಂತರ ವಿತರಿಸಲಾಗಿದೆ ಇಂತಹ ಹರಾಜು ಮುಖಾಂತರ ಮಂಡಳಿಗೆ ಸಂದಾಯವಾದ ಲಾಭವೆಷ್ಟು?